# ದುಡಿಯುವ ತನಕ ಕೆಲಸ ಸಿಗಲಿ

**ಸೀರುಂಡೆ ರಾಘು**
**ಝೀ ಕನ್ನಡ 'ಸತ್ಯ'ದ ಮಂಜ**

◆ **ನಿಮ್ಮ ಹಿನ್ನೆಲೆಯನ್ನು ಹೇಳಿ...**

ನಾಗಮಂಗಲ ನಮ್ಮೂರು, ಬೆಳೆದಿದ್ದು ಬೆಂಗಳೂರಿನಲ್ಲಿಯೇ. ಎಸ್‌ಎಸ್‌ಎಲ್‌ಸಿ ಫೇಲ್ ಆಗಿದ್ದೇನೆ. ಅಮ್ಮ ಮನೆ ಕೆಲಸ ಮಾಡಿ ಸಾಕಿದ್ದಾರೆ. ತಂದೆ ಮನೆ ಜವಾಬ್ದಾರಿಯನ್ನು ಅಷ್ಟಾಗಿ ತೆಗೆದುಕೊಂಡಿಲ್ಲ. 10ನೇ ತರಗತಿಯ ನಂತರ ಜ್ಯೂಸ್ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದೆ. ಪೀಣ್ಯದ ಒಂದು ಕಾರ್ಖಾನೆಯಲ್ಲಿ ಹೌಸ್ ಕೀಪಿಂಗ್ ಕೆಲಸಕ್ಕೆ ಸೇರಿದೆ. ಅಲ್ಲಿ ಸ್ವಚ್ಛತೆ ಕಾರ್ಯದ ಜೊತೆ ಟೀ– ಕಾಫಿ ಮಾಡ್ತಾ ಇದ್ದೆ. ಫ್ಯಾಕ್ಟರಿ ಬಿಟ್ಟನಂತರ ಇನ್ಶೂರೆನ್ಸ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದೆ. ಆಗಲೇ ನಾನು ಸ್ವಂತ ಏನಾದರೂ ಮಾಡಬೇಕು ಎಂದು ಯೋಚಿಸಿದೆ. ಅದಕ್ಕೆಲ್ಲ ಮೂಲ ಶಾಲಾದಿನಗಳಲ್ಲಿಯೇ ಮಿಮಿಕ್ರಿ ಮಾಡುವ ಗೀಳು ಬೆಳೆದಿತ್ತು. ಅದು ಕಲಾವಿದ ಆಗಬೇಕು ಎನ್ನುವ ಕನಸನ್ನೂ ಬಿತ್ತಿತ್ತು. ಆರ್ಕೆಸ್ಟ್ರಾಗಳಲ್ಲಿ ಡಾನ್ಸ್– ಮಿಮಿಕ್ರಿ ಮಾಡಲು ಅವಕಾಶ ಕೇಳುತ್ತಿದ್ದೆ. ಆಡಿಷನ್ ಕೊಡ್ತಾ ಆರ್ಕೆಸ್ಟ್ರಾ ಭಾಗವಹಿಸುತ್ತಿದ್ದೆ.

◆ **ಟೀವಿಗೆ ಬಣ್ಣ ಹಚ್ಚಿದ್ದು ಯಾವಾಗ?**

ಅದು 2009ರಲ್ಲಿ. ಆಡಿಷನ್ ಕೊಡ್ತಾನೇ ಇದ್ದೆ. ರಾಜ್ ಮ್ಯೂಸಿಕ್‌ನಲ್ಲಿ 'ಸ್ವಪ್ನ ಸುಂದರಿ V/S ಕ್ವಾರ್ಟರ್ ಕೃಷ್ಣ' ಕಾರ್ಯಕ್ರಮಕ್ಕೆ ಕುಡುಕನ ಪಾತ್ರ ನಿರ್ವಹಣೆ ಮಾಡಬೇಕಿತ್ತು. ಒಂದು ತಿಂಗಳ ನಂತರ ಅದು ನಿಂತಿತು. ಅದಾದ ಮೇಲೆ ಮತ್ತೆ ಕೆಲಸಕ್ಕೆ ಹೊರಟೆ. ಹೋಟೆಲ್ ಮಾಡಿ ನಷ್ಟವನ್ನು ಅನುಭವಿಸಿದೆ. ಅದನ್ನು ಮುಚ್ಚಿದ ಮೇಲೆ ರಾಜ್ ಮ್ಯುಸಿಕ್‌ನಲ್ಲೇ 'ಸಿಕ್ಕವರಿಗೆ ಸೀರುಂಡೆ' ಮಾಡಿದೆ. ಅದು ಬಕ್ರಾ ಮಾಡುವ ಶೋ. ಎರಡು ವರ್ಷ ಮಾಡಿದೆ. ಅದಾದ ಮೇಲೆ ಕಸ್ತೂರಿಯಲ್ಲಿ 'ಟೋಪಿವಾಲ'ಕ್ಕೆ ನಿರ್ದೇಶನ ಮಾಡಿದೆ. ಅದು ಒಂದು ವರ್ಷ ಆಯ್ತು. ಅದನ್ನು ಅನಿವಾರ್ಯ ಕಾರಣದಿಂದ ಬಿಡಬೇಕಾಗಿ ಬಂತು. ಮತ್ತೆ ನಾಲ್ಕು ವರ್ಷ ಕೆಲಸ ಇಲ್ಲದೆ ಮನೆಯಲ್ಲಿ ಕೂರಬೇಕಾಯ್ತು. ಕೆಲಸಕ್ಕೆ ಹೋಗ್ತೀನಿ ಅಂತ ಮನೆಯಿಂದ ಹೋಗಿ ರೈಲ್ವೇ ಸ್ಟೇಷನ್ ಸುತ್ತಿದ್ದು, ಗೆಳೆಯನ ರೂಮಿನಲ್ಲಿ ಹೋಗಿ ಮಲಗಿ ಬಂದಿದ್ದೂ ಆಯ್ತು. ಆಟೊ ಓಡಿಸುವ ತೀರ್ಮಾನ ಮಾಡಿ ಕೆಲಸ ಆರಂಭಿಸಿದೆ. ಅಲ್ಲಲ್ಲಿ ಜನ ಗುರುತಿಸುತ್ತಿದ್ದರು. ಹಾಗಾಗಿ ತೆರೆಯಲ್ಲಿಯೇ ಬದುಕು ಕಾಣಬೇಕು ಎಂದು ನಿರ್ಧರಿಸಿದೆ. ಅದಕ್ಕೆ ನನ್ನ ತಮ್ಮ ತುಂಬ ಪ್ರೋತ್ಸಾಹಿಸುತ್ತಿದ್ದ. 'ಮಜಾ ಭಾರತ' ಆಡಿಷನ್ ಕೊಟ್ಟಿದ್ದೆ. ಅಲ್ಲಿ ಅವಕಾಶ ಸಿಕ್ಕಿತು. 50 ಕಂತುಗಳು ಮುಗಿಯುವಷ್ಟರಲ್ಲಿ ನಿರ್ಮಾಣ ಸಂಸ್ಥೆ ಬದಲಾಯಿತು. ಆಗ ನಾನೂ ಹೊರ ಬಂದೆ. ಅದೇ ಸಮಯಕ್ಕೆ ಝೀ ಕನ್ನಡದ 'ಕಾಮಿಡಿ ಕಿಲಾಡಿಗಳು' ಆಡಿಷನ್ ನಡೀತಾ ಇತ್ತು. ಅಲ್ಲಿ ಅವಕಾಶವೂ ಸಿಕ್ಕಿತು. ನಾಲ್ಕನೇ ಕಂತಿನ ಹೊತ್ತಿಗೆ ಅಪಘಾತದಲ್ಲಿ ನನ್ನ ತಮ್ಮ ತೀರಿಕೊಳ್ಳುತ್ತಾನೆ. ಮಣ್ಣು ಮಾಡಿಕೊಂಡು ಹೋದ ನಂತರ ನಟನೆ ಮಾಡಿದೆ ಅವತ್ತಿನ ನಟನೆಗೆ 'ಉತ್ತಮ ನಟ ಪುರಸ್ಕಾರ' ಸಿಗುತ್ತದೆ. ಕಿಲಾಡಿಗಳಲ್ಲಿ ಸುಮಾರು ವರ್ಷ ಕೆಲಸ ಮಾಡಿ ಚಾಂಪಿಯನ್ ಆದೆ. ಅದರ ನಂತರ 'ಪಾರು' ಮಾಡಿ 'ಸತ್ಯ'ಕ್ಕೆ ಬಂದು ನಿಂತಿದ್ದೇನೆ. ಇದಕ್ಕೆಲ್ಲ ಮೂಲ ಕಾರಣ ನನ್ನ ತಾಯಿ. ಸ್ವಾಭಿಮಾನಿಯಾದ ಅವರು ಈಗಲೂ ಒಂದು ಚಿಕ್ಕ ಅಂಗಡಿಯನ್ನು ನಡೆಸುತ್ತಿದ್ದಾರೆ.

◆ **ಸತ್ಯದಲ್ಲಿ ಮಂಜನ ಮಹತ್ವ ಎಂತಹದ್ದು?**

ಸತ್ಯದ ಪಾತ್ರ ಮಂಜ ಎಂದಿದ್ದರೂ ಬಾವಮೈದ ಎಂದು ಖ್ಯಾತಿ ಪಡೆದಿದ್ದೇನೆ. ನನ್ನನ್ನು ಸೀರುಂಡೆ ರಾಘು ಎಂದೇ ಗುರುತಿಸುತ್ತಾರೆ. 'ಕಾಮಿಡಿ ಕಿಲಾಡಿ'ಗಳಂತಹ ಹಾಸ್ಯದ ಕಾರ್ಯಕ್ರಮಗಳಲ್ಲಿ ತಂಡದ ಎಲ್ಲರೂ ಕಾಮಿಡಿ ಮಾಡ್ತಾರೆ. ಸತ್ಯದಲ್ಲಿ ಹಾಗಲ್ಲ, ಇಲ್ಲಿ ನಾನೊಬ್ಬನೇ ಹಾಸ್ಯ ಕಲಾವಿದ. ಸ್ವಪ್ನ ಕೃಷ್ಣ ಅವರು ತುಂಬ ಚೆನ್ನಾಗಿ ಹೇಳಿಕೊಡುತ್ತಾರೆ. ಈ ಕಥೆಯ ನಾಯಕನ ಜೊತೆ ನಟಿಸುವಾಗಲೂ ಅದಕ್ಕೆ ಸಾಕಷ್ಟು ಅವಕಾಶ ಸಿಕ್ಕಿದೆ. ನನ್ನ ಹಾಸ್ಯದ ಗುಣ ಬಹುಬೇಗ ಈ ತಂಡದಲ್ಲಿ ಕುಟುಂಬದ ಬೆಸುಗೆಯನ್ನು ಹಾಕಿದೆ.

◆ **ಮುಂದಿನ ಕನಸುಗಳು?**

ಎಷ್ಟೋ ಜನರಿಗೆ ಕಲಾವಿದರಾಗಬೇಕು ಎಂದು ಆಸೆ ಇರುತ್ತದೆ. ಅದಕ್ಕಾಗಿ ಪ್ರಯತ್ನವನ್ನೂ ಮಾಡುತ್ತಾರೆ. ಆದರೆ ಯಶಸ್ಸು ಕೆಲವರಿಗೆ ಮಾತ್ರ ಸಿಗುತ್ತದೆ. ಪ್ರತಿಭೆಯ ಅನಾವರಣಕ್ಕೆ ತುಂಬ ವೇದಿಕೆಗಳೂ ಇವೆ. ಹೊಸ ಹೊಸ ನಟರು ಬರುತ್ತಾರೆ. ಆರಂಭದಲ್ಲಿ ನನಗೆ ಯಾರೋ ಅಪರಿಚಿತರೊಬ್ಬರು ಗುರುತಿಸಿದರೆ ಸಾಕು ಅನ್ನುವ ಬಯಕೆ ಇತ್ತು. ಅದು ನೂರರಷ್ಟು ಫಲಿಸಿದೆ. ಇಂತಹದ್ದೇ ಮಾಡಬೇಕು ಎನ್ನುವುದಿಲ್ಲ. ದೊಡ್ಡ ಪಾತ್ರವೇ ಬೇಕು ಎನ್ನುವ ಭ್ರಮೆಯೂ ಇಲ್ಲ. ನನಗೆ ದುಡಿಯುವ ಸಾಮರ್ಥ್ಯ ಇರುವತನಕ ಕೆಲಸ ಸಿಕ್ಕರೆ ಸಾಕು. ನನಗೆ ಇಲ್ಲಿ ಆದ ಅನುಭವ ಏನೆಂದರೆ, ಎಷ್ಟೇ ಕಷ್ಟ ಬಂದರು ಮತ್ತೊಬ್ಬರ ಬೆಂಬಲವನ್ನು ತೆಗೆದುಕೊಳ್ಳಬಾರದು. ಗುರಿಯನ್ನು ಸ್ಪಷ್ಟವಾಗಿ ಇಟ್ಟುಕೊಂಡು ಪ್ರಯತ್ನವನ್ನು ಮಾಡಬೇಕು. ನಮ್ಮ ದೌರ್ಬಲ್ಯಗಳನ್ನು ಯಾರ ಹತ್ತಿರವೂ ಹೇಳಿಕೊಳ್ಳದೆ ನಿರಂತರ ಪಯತ್ನ ಮಾಡಿದರೆ ಖಂಡಿತ ಯಶಸ್ಸು ಸಿಕ್ಕೇ ಸಿಗುತ್ತದೆ. ನಮ್ಮ ಫೋಕಸ್ ಗುರಿಯತ್ತ ನೆಟ್ಟಿರಬೇಕು. ಯಾರೇ ವಿರೋಧ ಮಾಡಿದರೂ ನಮ್ಮ ಪ್ರಯತ್ನ ನಿಲ್ಲಬಾರದು.



■ **ರಾಘವೇಂದ್ರ ಕೆ.**